# ಉದ್‌ಹಿಯ್ಯತ್ ಮಾಂಸವನ್ನು ಹಂಚುವುದು ಹೇಗೆ?

سؤال فيما يؤكل ويفرق من الأضحية

< الكنادي >

ಮುಹಮ್ಮದ್ ಸಾಲಿಹ್ ಅಲ್‌ಮುನಜ್ಜಿದ್

محمد صالح المنجد

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಹಸೈನಾರ್ ಸ್ವಲಾಹಿ

ترجمة: محمد حمزة البتوري

مراجعة: حسينار الصلاحي

# ಉದ್‌ಹಿಯ್ಯತ್ ಮಾಂಸವನ್ನು ಹಂಚುವುದು ಹೇಗೆ?

ಪ್ರಶ್ನೆ: *ಉದ್‌ಹಿಯ್ಯತ್* ಮಾಂಸವನ್ನು ಏನು ಮಾಡಬೇಕು? ಅದನ್ನು ಮೂರು ಪಾಲುಗಳಾಗಿ ವಿಂಗಡಿಸಬೇಕೇ ಅಥವಾ ನಾಲ್ಕು ಪಾಲುಗಳಾಗಿ ವಿಂಗಡಿಸಬೇಕೇ?

ಉತ್ತರ:

ಅಲ್‌ಹಮ್ದುಲಿಲ್ಲಾಹ್,

ಶರೀಅತ್ತಿನ ನಿಯಮ ಪ್ರಕಾರ *ಉದ್‌ಹಿಯ್ಯತ್* ನಿರ್ವಹಿಸುವವನು *ಉದ್‌ಹಿಯ್ಯತ್* ಮಾಂಸದಲ್ಲಿ ಸ್ವಲ್ಪವನ್ನು ತನಗೆ ಮತ್ತು ತನ್ನ ಮನೆಯವರಿಗೆ ತಿನ್ನಲು ತೆಗೆಯಬೇಕು, ಸ್ವಲ್ಪವನ್ನು ಕುಟುಂಬಿಕರಿಗೆ, ನೆರೆಯವರಿಗೆ ಮತ್ತು ಗೆಳೆಯರಿಗೆ ಉಡುಗೊರೆಯಾಗಿ ಕೊಡಬೇಕು ಮತ್ತು ಸ್ವಲ್ಪವನ್ನು ಬಡಬಗ್ಗರಿಗೆ ದಾನ ಮಾಡಬೇಕು.

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ فَكُلُواْ مِنۡهَا وَأَطۡعِمُواْ ٱلۡبَآئِسَ ٱلۡفَقِيرَ ٢٨ ﴾ [الحج : 28] .

"ನಂತರ ನೀವು ಅದರಿಂದ ಸ್ವಲ್ಪ ತಿನ್ನಿರಿ ಮತ್ತು ಕಡುಬಡವರಿಗೆ ತಿನ್ನಲು ಕೊಡಿ." [ಕುರ್‌ಆನ್ 22:28]

ಮತ್ತು ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ فَكُلُواْ مِنۡهَا وَأَطۡعِمُواْ ٱلۡقَانِعَ وَٱلۡمُعۡتَرَّۚ كَذَٰلِكَ سَخَّرۡنَٰهَا لَكُمۡ لَعَلَّكُمۡ تَشۡكُرُونَ ٣٦ ﴾ [الحج : 36]

.

"ನಂತರ ನೀವು ಅದರಿಂದ ಸ್ವಲ್ಪ ತಿನ್ನಿರಿ ಮತ್ತು ಕಾನಿಅ್ ಆಗಿರುವವರಿಗೆ ಹಾಗೂ ಮುಅ್‌ತರ್ರ್ ಆಗಿರುವವರಿಗೆ ತಿನ್ನಲು ಕೊಡಿ. ಹೀಗೆ ನಾವು ಅದನ್ನು (ಜಾನುವಾರನ್ನು) ನಿಮಗೆ ವಿಧೇಯಗೊಳಿಸಿಕೊಟ್ಟೆವು. ನೀವು ಕೃತಜ್ಞತೆ ಸಲ್ಲಿಸುವುದಕ್ಕಾಗಿ." [ಕುರ್‌ಆನ್ 22:36]

ಕಾನಿಅ್ ಎಂದರೆ ಜನರೊಂದಿಗೆ ಕೈ ಚಾಚಿ ಬೇಡದವನು ಮತ್ತು ಮುಅ್‌ತರ್ರ್ ಎಂದರೆ ಜನರೊಂದಿಗೆ ಕೈ ಚಾಚಿ ಬೇಡುವವನು.

عَنْ سَلَمَةَ بْنِ الْأَكْوَعِ رَضِيَ اللَّهُ عَنْهُ أَنَّ النَّبِيَّ ﷺ قَالَ: { كُلُوا وَأَطْعِمُوا وَادَّخِرُوا } رواه البخاري.

"ಸಲಮಃ ಇಬ್ನುಲ್ ಅಕ್ವಅ್(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: ನೀವು ತಿನ್ನಿರಿ, ತಿನ್ನಲು ಕೊಡಿ ಮತ್ತು ತೆಗೆದಿರಿಸಿ." [ಅಲ್‌ಬುಖಾರಿ]

ತಿನ್ನಲು ಕೊಡಿ ಎಂದರೆ ಶ್ರೀಮಂತರಿಗೆ ಉಡುಗೊರೆಯಾಗಿ ಕೊಡಿ ಮತ್ತು ಬಡವರಿಗೆ ದಾನವಾಗಿ ಕೊಡಿ ಎಂದರ್ಥ.

عَنْ عَائِشَةَ رَضِيَ اللَّهُ عَنْهَا أَنَّ النَّبِيَّ ﷺ قَالَ: { كُلُوا وَادَّخِرُوا وَتَصَدَّقُوا } رواه مسلم.

"ಆಯಿಶಾ(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: ನೀವು ತಿನ್ನಿರಿ, ತೆಗೆದಿರಿಸಿ ಮತ್ತು ದಾನ ಮಾಡಿ." [ಮುಸ್ಲಿಮ್]

*ಉದ್‌ಹಿಯ್ಯತ್* ಮಾಂಸದಲ್ಲಿ ಎಷ್ಟು ತಿನ್ನಬೇಕು, ಎಷ್ಟು ಉಡುಗೊರೆಯಾಗಿ ಕೊಡಬೇಕು ಮತ್ತು ಎಷ್ಟು ದಾನ ಮಾಡಬೇಕು ಎಂಬ ವಿಷಯದಲ್ಲಿ ಉಲಮಾಗಳಿಗೆ ಭಿನ್ನಾಭಿಪ್ರಾಯವಿದೆ. ಇಂತಿಷ್ಟು ಮಾತ್ರ ತಿನ್ನಬೇಕು, ಅಥವಾ ಇಂತಿಷ್ಟು ಮಾತ್ರ ದಾನ ಮಾಡಬೇಕು ಎಂಬ ನಿಯಮವಿಲ್ಲ. ಆದರೆ ಪ್ರಖ್ಯಾತ ಅಭಿಪ್ರಾಯ ಪ್ರಕಾರ *ಉದ್‌ಹಿಯ್ಯತ್* ಮಾಂಸವನ್ನು ಮೂರು ಸಮಪಾಲು ಮಾಡಿ, ಒಂದು ಪಾಲನ್ನು ತಾನು ಮತ್ತು ಮನೆಯವರು ತಿನ್ನಬೇಕು, ಇನ್ನೊಂದು ಪಾಲನ್ನು ಕುಟುಂಬಿಕರಿಗೆ, ನೆರೆಯವರಿಗೆ ಮತ್ತು ಗೆಳೆಯರಿಗೆ ಉಡುಗೊರೆಯಾಗಿ ಕೊಡಬೇಕು ಮತ್ತು ಮೂರನೇ ಪಾಲನ್ನು ಬಡಬಗ್ಗರಿಗೆ ದಾನ ಮಾಡಬೇಕು. ತಾನು ಮತ್ತು ತನ್ನ ಮನೆಯವರು ತಿನ್ನಲು ಇರುವಂತಹ ಮೊದಲನೆ ಪಾಲನ್ನು ಎಷ್ಟು ದಿನ ಬೇಕಾದರೂ ತೆಗೆದಿರಿಸಬಹುದು. ಇಂತಿಷ್ಟು ದಿನದೊಳಗೆ ಅದನ್ನು ತಿಂದು ಮುಗಿಸಬೇಕು ಎಂಬ ನಿಯಮವಿಲ್ಲ. ಆದರೆ ಬರಗಾಲದ ಸಂದರ್ಭದಲ್ಲಿ ಮೂರು ದಿನಕ್ಕಿಂತ ಹೆಚ್ಚು ಕಾಲ ತೆಗೆದಿರಿಸಲು ಅನುಮತಿಯಿಲ್ಲ.

عَنْ سَلَمَةَ بْنِ الْأَكْوَعِ رَضِيَ اللَّهُ عَنْهُ قَالَ: قَالَ رَسُولُ اللَّهِ ﷺ: { مَنْ ضَحَّى مِنْكُمْ فَلَا يُصْبِحَنَّ بَعْدَ ثَالِثَةٍ وَفِي بَيْتِهِ مِنْهُ شَيْءٌ }، فَلَمَّا كَانَ الْعَامُ الْمُقْبِلُ قَالُوا: يَا رَسُولَ اللَّهِ، نَفْعَلُ كَمَا فَعَلْنَا فِي الْعَامِ الْمَاضِي؟ فَقَالَ رَسُولُ اللَّهِ ﷺ: { كُلُوا وَأَطْعِمُوا وَادَّخِرُوا، فَإِنَّ ذَلِكَ الْعَامَ كَانَ فِي النَّاسِ جَهْدٌ فَأَرَدْتُ أَنْ تُعِينُوا فِيهَا } رواه البخاري ومسلم.

"ಸಲಮಃ ಇಬ್ನುಲ್ ಅಕ್ವಅ್(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: ನಿಮ್ಮಲ್ಲಿ ಯಾರಾದರೂ *ಉದ್‌ಹಿಯ್ಯತ್* ಮಾಡಿದರೆ, ಮೂರನೆಯ ದಿನದ ಬಳಿಕ *ಉದ್‌ಹಿಯ್ಯತ್ತಿನ* ಮಾಂಸ ಅವನ ಮನೆಯಲ್ಲಿ ಇರಬಾರದು. ಹೀಗೆ ಮುಂದಿನ ವರ್ಷ ಬಂದಾಗ ಸಹಾಬಾಗಳು ಕೇಳಿದರು: ಓ ಅಲ್ಲಾಹನ ರಸೂಲರೇ! ನಾವು ಹಿಂದಿನ ವರ್ಷ ಮಾಡಿದಂತೆಯೇ ಈ ವರ್ಷ ಮಾಡಬೇಕೇ? (ಅಂದರೆ ಹಿಂದಿನ ವರ್ಷ ನಾವು ಮೂರು ದಿನಗಳಿಗಿಂತ ಹೆಚ್ಚು ಕಾಲ *ಉದ್‌ಹಿಯ್ಯತ್* ಮಾಂಸವನ್ನು ಮನೆಯಲ್ಲಿ ತೆಗೆದಿರಿಸದಂತೆ ಈ ವರ್ಷವೂ ತೆಗೆದಿರಿಸಬಾರದೇ?). ಆಗ ಪ್ರವಾದಿ(ﷺ)ರವರು ಹೇಳಿದರು: ನೀವು ತಿನ್ನಿರಿ, ತಿನ್ನಲು ಕೊಡಿ ಮತ್ತು ತೆಗೆದಿರಿಸಿ. ನಾನು ಹಿಂದಿನ ವರ್ಷ ಹಾಗೆ ಹೇಳಿದ್ದು

ಯಾಕೆಂದರೆ ಆಗ ಬರಗಾಲವಿತ್ತು ಮತ್ತು ನೀವು ಜನರಿಗೆ ಸಹಾಯ ಮಾಡಬೇಕೆಂದು ನಾನು ಬಯಸಿದ್ದೆ." [ಅಲ್‌ಬುಖಾರಿ ಮತ್ತು ಮುಸ್ಲಿಮ್]

*ಉದ್‌ಹಿಯ್ಯತ್* ಮಾಡುವುದು ಕಡ್ಡಾಯ ರೂಪದಲ್ಲಾಗಿದ್ದರೂ, ಐಚ್ಛಿಕ ರೂಪದಲ್ಲಾಗಿದ್ದರೂ, ಜೀವಂತವಿರುವವನ ಪರವಾಗಿದ್ದರೂ, ಮರಣಹೊಂದಿದವನ ಪರವಾಗಿದ್ದರೂ, ವಸಿಯ್ಯತ್ ನೆರವೇರಿಸುವುದಕ್ಕಾಗಿದ್ದರೂ ಈ ನಿಯಮದಲ್ಲಿ (ಅದರಿಂದ ಸ್ವಲ್ಪ ತಿನ್ನಬೇಕು, ಸ್ವಲ್ಪ ಉಡುಗೊರೆ ಕೊಡಬೇಕು ಮತ್ತು ಸ್ವಲ್ಪ ದಾನ ಮಾಡಬೇಕು ಎಂಬ ನಿಯಮದಲ್ಲಿ) ಯಾವುದೇ ವ್ಯತ್ಯಾಸವಿಲ್ಲ.

ಆದರೆ ಇನ್ನೊಬ್ಬರು ಹೊಣೆ ವಹಿಸಿಕೊಟ್ಟ *ಉದ್‌ಹಿಯ್ಯತ್* ಆಗಿದ್ದರೆ, (ಅಂದರೆ ನನ್ನ ಪರವಾಗಿ ನೀನು *ಉದ್‌ಹಿಯ್ಯತ್* ಮಾಡು ಎಂದು ಯಾರಾದರೂ ಉದ್‌ಹಿಯ್ಯತ್ ಮಾಡುವ ಹೊಣೆಯನ್ನು ವಹಿಸಿಕೊಟ್ಟ *ಉದ್‌ಹಿಯ್ಯತ್* ಆಗಿದ್ದರೆ), ಹೊಣೆ ವಹಿಸಿದವನ ಅನುಮತಿಯಿದ್ದರೆ ಅದನ್ನು ತಿನ್ನುವುದು, ಉಡುಗೊರೆ ಕೊಡುವುದು ಮತ್ತು ದಾನ ಮಾಡುವುದರಲ್ಲಿ ತೊಂದರೆಯಿಲ್ಲ. ಆದರೆ ಆತನ ಅನುಮತಿಯಿಲ್ಲದಿದ್ದರೆ ಆ ಎಲ್ಲ ಮಾಂಸವನ್ನೂ ಅವನಿಗೇ ಕೊಟ್ಟುಬಿಡಬೇಕು.

*ಉದ್‌ಹಿಯ್ಯತ್* ಮಾಡಲಾದ ಪ್ರಾಣಿಯ ಶರೀರದ ಯಾವುದೇ ಭಾಗವನ್ನೂ ಮಾರಾಟ ಮಾಡಲು ಅನುಮತಿಯಿಲ್ಲ. ಅದು ಮಾಂಸವೋ, ಚರ್ಮವೋ ಅಥವಾ ಇನ್ನಿತರ ಯಾವುದೇ ಭಾಗವಾಗಿದ್ದರೂ ಸಹ. ಕಸಾಯಿಗೆ ಕೂಲಿಯಾಗಿ ಆ ಪ್ರಾಣಿಯ ಶರೀರದ ಯಾವುದೇ ಭಾಗವನ್ನೂ ನೀಡಬಾರದು. ಯಾಕೆಂದರೆ ಅದು ಮಾರಾಟ ಮಾಡುವುದಕ್ಕೆ ಸಮವಾಗಿದೆ.

ಆದರೆ *ಉದ್‌ಹಿಯ್ಯತ್* ಮಾಂಸವನ್ನು ಉಡುಗೊರೆಯಾಗಿ ಅಥವಾ ದಾನವಾಗಿ ಸ್ವೀಕರಿಸಿದ ವ್ಯಕ್ತಿ ಆ ಮಾಂಸವನ್ನು ಸ್ವತಃ ಉಪಯೋಗಿಸುವುದರಲ್ಲೋ ಮಾರಾಟ ಮಾಡುವುದರಲ್ಲೋ ತೊಂದರೆಯಿಲ್ಲ. ಆದರೆ ಆತ ಅದನ್ನು ತನಗೆ ಉಡುಗೊರೆಯಾಗಿ ಅಥವಾ ದಾನವಾಗಿ ನೀಡಿದ ವ್ಯಕ್ತಿಗೇ ಮಾರಾಟ ಮಾಡಬಾರದು.

وَصَلَّى اللهُ وَسَلَّمَ عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين.

*********

IslamHouse.com